*

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C:66/2018
CW- 2 PW-1

ಹೆಸರು : ಬೀರಪ್ಪ

ತಂದೆಯ ಹೆಸರು : ಸಾಬಣ್ಣ ದುಬ್ಬಾಡಿ

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಎಸಿಸಿ ಕಂಪನಿಯಲ್ಲಿ ನೌಕರ

ವಾಸ ಸ್ಥಳ : ವಾಡಿ

---

ಪ್ರಮಾಣವಚನ ಭೋಧಿಸಲಾಯಿತು. ದಿಃ 24.02.2026

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ಚಾಸಾ-1 ನನ್ನ ಅಣ್ಣ. ಅವರು ತೀರಿಕೊಂಡಿರುತ್ತಾರೆ. ಚಾಸಾ-3ರವರ ಪರಿಚಯ ಇದೆ. ಚಾಸಾ-4 ನನ್ನ ಸೊಸೆ. ಚಾಸಾ-5 ರಿಂದ 11 ನನ್ನ ಸಂಬಂಧಿಕರು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ನೋಡಿಲ್ಲ.

ಸುಮಾರು 9 ವರ್ಷಗಳ ಹಿಂದೆ ನಮ್ಮ ಅಳಿಯನಾದ ಚಾಸಾ-1 ನನಗೆ ಕರೆ ಮಾಡಿ ನನ್ನ ಅಣ್ಣನ ಮಗನಾದ ಮಲ್ಲಿಕಾರ್ಜುನ್ ಈತನ ಬೈಕ್ ಗೆ ಅಪಘಾತ ಆಗಿದೆ ಎಂದು ತಿಳಿಸಿದರು. ಆ ಕಾರಣ ನಾನು ಚಾಸಾ- 4 ರಿಂದ 11 ರವರು ಚಿತ್ತಾಪುರಕ್ಕೆ ಬಂದಿರುತ್ತೇವೆ. ಆಗ ನಮ್ಮ ಅಣ್ಣನ ಮಗನಾದ ಮಲ್ಲಿಕಾರ್ಜುನ್ ಈತ ತೀರಿಕೊಂಡಿದ್ದು ಗೊತ್ತಾಯಿತು ಮತ್ತು ಆತನ ಬೈಕ್ ನ ಹಿಂದೆ ಕುಳಿತಿದ್ದ ಚಾಸಾ-3ರವರಿಗೆ ಅಪಘಾತದಲ್ಲಿ ಗಾಯಗಳಾಗಿದ್ದು ಕಂಡು ಬಂತು. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನನಗೆ ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಪೋಲೀಸರು ನನಗೆ ಎಂದಿಗೂ ಆರೋಪಿಯನ್ನು ತೋರಿಸಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ22.11.2017ರಂದು ಹೀಗಿದ್ದು ----------------------------ನಿಜವಿರುತ್ತದೆ ಎಂದು ಪೋಲೀಸರ ಬಳಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಮತ್ತು ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ- 1 ಎಂದು ಗುರುತಿಸಲಾಯಿತು.

ದಿಃ25.11.2017ರಂದು ನಾನು ----------------------------ನಿಜವಿದೆ ಎಂದು ಪೋಲೀಸರ ಬಳಿ ಪುರವಣಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಮತ್ತು ಸಾಕ್ಷಿ ಅಲ್ಲಗಳೆದ ಪುರವಣಿ ಹೇಳಿಕೆಯನ್ನು ನಿಪಿ- 2 ಎಂದು ಗುರುತಿಸಲಾಯಿತು. ನಿಪಿ- 1 ಮತ್ತು 2ರಂತೆ ಹೇಳಿಕೆ ಮತ್ತು ಪುರವಣಿ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಎನ್.ಪಿ. ವಕೀಲರಿಂದ - ಏನು ಇಲ್ಲಾ</u>

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.